ಓ.ಎಸ್. ನಂಬರಃ 22/2017

ಪಿ. ಡಬ್ಲ್ಯೂಃ 3

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 20-02-2026)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎಲ್.ಎನ್. ವಕೀಲರಿಂದ,

ನಿಪಿ-31 ರಂತೆ ಪ್ರತಿವಾದಿ ಬ್ಯಾಂಕ್ ಖಾತೆ ತೆರೆಯುವ ಸಂದರ್ಭದಲ್ಲಿ ನಾನು ಭಟ್ಕಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ನವಾಯತ್ ಕಾಲೋನಿ ಶಾಖೆಯಲ್ಲಿ ವ್ಯವಸ್ಥಾಪಕನಾಗಿರಲಿಲ್ಲ. ಹಾಗಾಗಿ ನಿಪಿ-31 ಬ್ಯಾಂಕ್ ಖಾತೆಯ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ, ಸಾಕ್ಷಿಯು ವೈಯಕ್ತಿಕ ಮಾಹಿತಿ ಇರುವುದಿಲ್ಲ, ದಾಖಲಾತಿಗಳ ಆಧಾರದಲ್ಲಿ ಮಾಹಿತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ದಾಖಲಾತಿಗಳ ಆಧಾರದಲ್ಲಿ ಮಾಹಿತಿಯನ್ನು ನಾನು ನವಾಯತ್ ಕಾಲೋನಿ ಶಾಖೆಯ ವ್ಯವಸ್ಥಾಪಕನಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಪಡೆದುಕೊಂಡಿರುತ್ತೇನೆ. ನವಾಯತ್ ಕಾಲೋನಿ ಶಾಖೆಯ ವ್ಯವಸ್ಥಾಪಕನಾಗಿ ದಿನಾಂಕಃ 07-11-2025 ರಂದು ಅಧಿಕಾರ ವಹಿಸಿಕೊಂಡಿರುತ್ತೇನೆ. ನಾನು ವ್ಯವಸ್ಥಾಪಕನಾಗಿ ನಾಲ್ಕು ತಿಂಗಳು ಆಗಿರುತ್ತದೆ. ಅದಕ್ಕಿಂತ ಪೂರ್ವದಲ್ಲಿ ನಾನು ಬ್ಯಾಂಕಿನಲ್ಲಿ ಸಾಲ ವಸೂಲಾತಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆನು.

2. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯುವಾಗ ಸಾಮಾನ್ಯವಾಗಿ ಗ್ರಾಹಕರಿಂದ ಆಧಾರ ಕಾರ್ಡ, ಪಾನ್ ಕಾರ್ಡ, ಪೋಟೋ ಮತ್ತು ಖಾತೆ ತೆರೆಯಲು ಅರ್ಜಿಯನ್ನು ಪಡೆದುಕೊಳ್ಳುತ್ತೇವೆ. ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಹೆಸರಿನಲ್ಲಿ ಚಾಲ್ತಿ ಖಾತೆಯನ್ನು ತೆರೆಯುವಾಗ ಖಾತೆ ತೆರೆಯಲು ಅರ್ಜಿ, ಆಧಾರ ಕಾರ್ಡ, ಪಾನ್ ಕಾರ್ಡ, ಪೋಟೋ, ಸಂಬಂಧಪಟ್ಟ ಇಲಾಖೆಯಿಂದ ವ್ಯವಹಾರ ನಡೆಸಲು ನೀಡಲಾದ ಪರವಾನಿಗೆಯ ಪ್ರತಿ ಮತ್ತು ಬಾಡಿಗೆ ಕರಾರು ಪತ್ರವನ್ನು ಪಡೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಎಲ್ಲಾ ಚಾಲ್ತಿ ಖಾತೆಗಳನ್ನು ತೆರೆಯುವಾಗ ಈ ಮೇಲೆ ಹೇಳಿದ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ. ಚಾಲ್ತಿ ಖಾತೆಯನ್ನು ತೆರೆಯುವಾಗ ಪರವಾನಿಗೆಯ ಪ್ರತಿ ಮತ್ತು ಬಾಡಿಗೆ ಕರಾರು ಪತ್ರವನ್ನು ಪಡೆದುಕೊಳ್ಳುವಂತಹ ನಿಯಮಾವಳಿ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ. ಒಬ್ಬ ಗ್ರಾಹಕನು ಏಕಕಾಲದಲ್ಲಿ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಯನ್ನು ತೆರೆಯಬಹುದು. ಒಂದು ವ್ಯವಹಾರದ ಹೆಸರಿನಲ್ಲಿ ಚಾಲ್ತಿ ಖಾತೆಯನ್ನು ತೆರೆಯುವಾಗ ಪರವಾನಿಗೆಯ ಪ್ರತಿ ಮತ್ತು ಬಾಡಿಗೆ ಕರಾರು ಪತ್ರ ಇಲ್ಲದೇ ಇದ್ದರೆ, ಚಾಲ್ತಿ ಖಾತೆಯನ್ನು ವ್ಯವಹಾರದ ಹೆಸರಿನಲ್ಲಿ ತೆರೆಯಲಾಗುವುದಿಲ್ಲ. ಯಾವುದೇ ಒಬ್ಬ ಗ್ರಾಹಕನು ಯಾವುದೇ ವ್ಯವಹಾರ ಇಲ್ಲದಿದ್ದರೂ ಸಹ ಚಾಲ್ತಿ ಖಾತೆಯನ್ನು ತೆರೆಯಲು ಸಾಧ್ಯವಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಾಲ್ತಿ ಖಾತೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಲ್ತಿ ಖಾತೆಯನ್ನು ತೆರೆಯಲು ನೀಡಿದ ಅರ್ಜಿಯಲ್ಲಿ ಯಾವೆಲ್ಲಾ ದಾಖಲಾತಿಗಳನ್ನು ಗ್ರಾಹಕನಿಂದ ಪಡೆದಿದ್ದೇವೆಂದು ನಮೂದು ಮಾಡುವುದಿಲ್ಲ. ಚಾಲ್ತಿ ಖಾತೆಯನ್ನು ತೆರೆಯುವಾಗ ಗ್ರಾಹಕನಿಂದ ದಾಖಲಾತಿಗಳ ಪ್ರತಿಯನ್ನು ಪಡೆದು, ಸದ್ರಿ ಪ್ರತಿಗಳನ್ನು ಮೂಲ ದಾಖಲಾತಿಗಳೊಂದಿಗೆ ತಾಳೆ ನೋಡಿ, ಮೂಲ ದಾಖಲಾತಿಗಳನ್ನು ಗ್ರಾಹಕನಿಗೆ ಮರಳಿ ನೀಡುತ್ತೇವೆ. ಆ ರೀತಿ ದಾಖಲಾತಿಗಳ ಪರಿಶೀಲನೆಯನ್ನು

ವ್ಯವಸ್ಥಾಪಕರೇ ಮಾಡುತ್ತಾರೆ. ಆ ರೀತಿ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿದ ಬಗ್ಗೆ ಯಾವುದೇ ಷರಾವನ್ನು ದಾಖಲಾತಿಗಳ ಮೇಲೆ ಹಾಕುವುದಿಲ್ಲ. ನಾವು ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ಇರುವುದರಿಂದ ಆ ಬಗ್ಗೆ ಷರಾ ಹಾಕುವುದಿಲ್ಲ ಎಂದರೆ ಸರಿಯಲ್ಲ, ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡುತ್ತೇವೆ.

3. ನಿಪಿ-31 ರಂತೆ ಖಾತೆಯನ್ನು ತೆರೆಯುವಾಗ ಪ್ರತಿವಾದಿಯವರು ನಿಪಿ-32 ರಿಂದ 35 ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾರು, ಯಾರ ಮೇಲೆ ದಾಖಲಿಸಿದ್ದಾರೆ ಎಂದು ಗೊತ್ತಿಲ್ಲ. ನನಗೆ ಈ ದಾವೆಯಲ್ಲಿ ಪ್ರತಿವಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಲು ಸಮನ್ಸ ಜಾರಿಯಾಗಿರುತ್ತದೆ. ನಿಪಿ-32 ರಿಂದ 35 ದಾಖಲಾತಿಗಳನ್ನು ನಾನು ವಾದಿಯ ಜೊತೆ ಶಾಮಿಲಾಗಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಯವರ ಜೊತೆ ಶಾಮಿಲಾಗಿ ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳಾಗಿ ಸೃಷ್ಠಿಸಿದ್ದರಿಂದ ನಿಪಿ-35 ರ ಕರಾರಿನ 1 ರಿಂದ 3 ನೇ ಪುಟಗಳಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ, ಸಾಕ್ಷಿಯು 4ನೇ ಪುಟದಲ್ಲಿ ಸಹಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ಯಾವ ಪುಟದಲ್ಲಿ ಸಹಿ ಇದೆಯೋ, ಆ ಪುಟದಲ್ಲಿ ಸ್ವತ್ತಿನ ವಿವರಣೆ ಇರುವುದಿಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**